ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ,
ಕುಂದಾಪುರ

ಸಿ.ಸಿ. ನಂಬ್ರ:390/2018

ಚಾಸಾ:2 ಫ್ರಾಸಾ:2

ದಿನಾಂಕ: 22.09.2023

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಕೇಶವ ಶೆಟ್ಟಿಗಾರ |
| ತಂದೆಯ ಹೆಸರು | : | ಮಹಾಲಿಂಗ ಶೆಟ್ಟಿಗಾರ |
| ವಯಸ್ಸು | : | 62 ವರ್ಷ |
| ಉದ್ಯೋಗ | : | ಸಣ್ಣ ಅಂಗಡಿ |
| ವಾಸ ಸ್ಥಳ | : | ತ್ರಾಸಿ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**<u>ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:</u>**

ಸುಮಾರು 5-6 ವರ್ಷಗಳ ಹಿಂದೆ ತ್ರಾಸಿ ಜಂಕ್ಷನ್ ಬಳಿ ಸೈಕಲ್ ಮತ್ತು ಲಾರಿ ನಡುವೆ ಅಪಘಾತವಾಗಿತ್ತು. ನಾನು ಅಪಘಾತವನ್ನು ನೋಡಿರುವುದಿಲ್ಲ. ಅಪಘಾತ ಹೇಗೆ ಆಯಿತು ಎಂದು ಗೊತ್ತಿಲ್ಲ. ಅಪಘಾತದಲ್ಲಿ ಸೈಕಲ್ ಸವಾರ ಆನಂದ ಹೆಬ್ಬಾರ್ ಮೃತಪಟ್ಟಿರುತ್ತಾರೆ. ಸಾಕ್ಷಿಗೆ ನಿಪಿ-2 ರ ಮಹಜರನ್ನು ಹಾಗೂ ನಿಪಿ-3 ರ ನಕಾಶೆಯನ್ನು ತೋರಿಸಲಾಗಿ ಅವುಗಳಲ್ಲಿನ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು, ಸದ್ರಿ ಸಹಿಗಳನ್ನು ನಿಪಿ-2(ಬಿ) ಮತ್ತು ನಿಪಿ-3(ಬಿ) ಎಂದು ಗುರುತಿಸಲಾಯಿತು. ನಿಪಿ-3 ಮತ್ತು 4 ರಲ್ಲಿನ ಸಹಿಗಳನ್ನು ಪೊಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ. ಸದ್ರಿ ದಾಖಲೆಗಳಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮದಲ್ಲಿ ಯಾವುದೇ ಸ್ವತ್ತನ್ನು ವಶಪಡಿಸಿಕೊಂಡಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ವಿರುದ್ಧವಾಗಿ ಸಾಕ್ಷಿ ನುಡಿದಿದ್ದರಿಂದ ಮಾನ್ಯ ಸ.ಸ.ಅ.ರವರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)**

**<u>ಪಾಟೀ ಸವಾಲು: ಮಾನ್ಯ ಸ.ಸ.ಅ.ರವರಿಂದ:</u>**

ದಿಃ 09-12-2017 ರಂದು ನಾನು ಕೆಲಸದ ನಿಮಿತ್ತ ನನ್ನ ಮೋಟಾರು ಸೈಕಲಿನಲ್ಲಿ ಹೊಸಪೇಟೆ ಕಡೆಗೆ ಹೊರಟ್ಟಿದಾಗ ಬೆಳಿಗ್ಗೆ 8-30 ಗಂಟೆ ಸಮಯಕ್ಕೆ ತ್ರಾಸಿ ಜಂಕ್ಷನ್ ನಿಂದ ಸ್ವಲ್ಪ ಮುಂದೆ ನನ್ನ ಹಿಂದಿನಿಂದ ಕುಂದಾಪುರ ಕಡೆಯಿಂದ ಬೈಂದೂರು ಕಡೆಗೆ ಒಂದು ಲಾರಿಯನ್ನು ಅದರ ಚಾಲಕ ಅತೀ ವೇಗ ಹಾಗೂ ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬಂದು ನನ್ನ ವಾಹನವನ್ನು ಓವರ್ ಟೇಕ್ ಮಾಡಿ ತೀರ ಬಲಭಾಗಕ್ಕೆ ಹೋಗಿ ಮರವಂತೆ ಕಡೆಯಿಂದ ತ್ರಾಸಿ ಜಂಕ್ಷನ್ ಕಡೆಗೆ ಸೈಕಲಿನಲ್ಲಿ ಬರುತ್ತಿದ್ದ ವ್ಯಕ್ತಿಗೆ ಲಾರಿ ಡಿಕ್ಕಿ ಹೊಡೆದು ಸೈಕಲ್ ಸವಾರ ಕೆಳಗೆ ಬಿದ್ದಿರುತ್ತಾರೆ ಎಂದರೆ ನಾನು ನೋಡಿಲ್ಲ.

ಅಪಘಾತ ನೋಡಿದ ನಾನು ಮತ್ತು ರಸ್ತೆಯಲ್ಲಿ ಹೋಗುತ್ತಿದ್ದವರು ಸೈಕಲ್ ಸವಾರರನ್ನು ಎತ್ತಿ ಉಪಚರಿಸಿದ್ದು, ಆತ ನನ್ನ ಪರಿಚಯದ ಆನಂದ ಹೆಬ್ಬಾರ್ ಆಗಿದ್ದು ಅವರ ತಲೆಗೆ ತೀವ್ರ ಸ್ವರೂಪದ ಗಾಯ ಉಂಟಾಗಿ ಕೈ ಕಾಲಿಗೆ ತರುಚಿದ ಗಾಯ ಉಂಟಾಗಿದ್ದು, ಅಪಘಾತದ ವಿಷಯವನ್ನು ಅವರ ಮನೆಯವರಿಗೆ ತಿಳಿದು ಆನಂದ ಹೆಬ್ಬಾರ್ ರವರ ಮಗಳು ಬಂದು ಅವರನ್ನು ಅಂಬುಲೆನ್ಸ್ ನಲ್ಲಿ ಚಿಕಿತ್ಸೆಗೆ ಕರೆದುಕೊಂಡು ಹೋದರು ಎಂದರೆ ನನಗೆ ಗೊತ್ತಿಲ್ಲ, ಸಾಕ್ಷಿ ಮುಂದುವರೆದು ಆನಂದ ಹೆಬ್ಬಾರ್ ರವರನ್ನು ಅಂಬುಲೆನ್ಸ್ ನಲ್ಲಿ ಕರೆದುಕೊಂಡು ಹೋಗುವಾಗ ನಾನು ಬಂದಿದ್ದು ಎಂದು ನುಡಿದಿರುತ್ತಾರೆ.

ಅಪಘಾತದ ಸ್ಥಳದಲ್ಲಿ ಲಾರಿ ನಿಂತಿದ್ದು ಅದರ ನಂಬ್ರ ಕೆಎಲ್ 05- ಎಎಂ 9795 ಆಗಿದ್ದು ಲಾರಿಯ ಚಾಲಕನ ಹೆಸರು ಅಜೋಮನ್ ವರ್ಗಿಸ್ ಎಂದು ತಿಳಿದು ಬಂದಿದ್ದು, ಗಾಯಾಳು ಆನಂದ ಹೆಬ್ಬಾರವರನ್ನು ಚಿಕಿತ್ಸೆಗಾಗಿ ಕರೆದುಕೊಂಡು ಹೋಗುವಾಗ ದಾರಿಯಲ್ಲಿ ಮೃತಪಟ್ಟ ವಿಷಯ ನನಗೆ ತಿಳಿದಿದ್ದು, ಈ ಅಪಘಾತಕ್ಕೆ ಲಾರಿ ಚಾಲಕನ ಅತೀ ವೇಗ ಮತ್ತು ಅಜಾಗರೂಕತೆಯ ಚಾಲನೆಯೇ ಕಾರಣವಾಗಿರುತ್ತದೆ ಎಂದರೆ ಸರಿಯಲ್ಲ.

ದಿಃ 10-12-2017 ರಂದು ಪೊಲೀಸರು ಅಪಘಾತ ಸ್ಥಳಕ್ಕೆ ಮಹಜರು ಮಾಡಲು ಬಂದಿದ್ದು, ನಾನು ತೋರಿಸಿಕೊಟ್ಟ ಸ್ಥಳದಲ್ಲಿ ಚಾಸಾ-1, 3 ಮತ್ತು ನನ್ನ ಸಮಕ್ಷಮ ಮಹಜರು ಮಾಡಿ ಅಪಘಾತಕ್ಕೆ ಸಂಬಂಧಿಸಿದ ಎರಡು ವಾಹನಗಳನ್ನು ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಪೊಲೀಸರು ಸ್ಥಳದಲ್ಲಿ ಮಹಜರು ಮಾಡಿರುತ್ತಾರೆ ಎಂದರೆ ಸರಿ, ಸಾಕ್ಷಿ ಮುಂದುವರೆದು ಮಹಜರು ಮತ್ತು ಕಚ್ಚಾ ನಕ್ಷೆಗೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎನ್ನುತ್ತಾರೆ. ಮಹಜರು ಸಮಯದಲ್ಲಿ ಸ್ಥಳದಲ್ಲಿ ವಾಹನಗಳು ಇತ್ತು ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ವಾಹನಗಳು ಪೊಲೀಸ್ ಠಾಣೆಯಲ್ಲಿ ಇತ್ತು ಎನ್ನುತ್ತಾರೆ.

ಈ ಮೇಲೆ ಓದಿ ಹೇಳಿದಂತೆ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದ್ರಿ ಹೇಳಿಕೆಯನ್ನು ನಿಪಿ-4 ಎಂದು ಗುರುತಿಸಲಾಯಿತು. ಸಾಕ್ಷಿಗೆ ಮಹಜರು ಸಮಯದಲ್ಲಿ ತೆಗೆಯಲಾದ ಛಾಯಚಿತ್ರವನ್ನು ತೋರಿಸಲಾಗಿ ಅದರಲ್ಲಿ ತಾನು ಇರುವುದಾಗಿ ಗುರುತಿಸಿದ ಮೇರೆಗೆ ಸದ್ರಿ ಛಾಯಚಿತ್ರವನ್ನು ನಿಪಿ-5 ಎಂದು ಗುರುತಿಸಲಾಯಿತು. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಆರ್ ಎಂ ಎಸ್ ವಕೀಲರಿಂದಃ</u>**

ನಾನು ಅಪಘಾತವನ್ನು ಕಣ್ಣಾರೆ ನೋಡಿರುವುದಿಲ್ಲ. ನಿಪಿ-2 ಮತ್ತು 3 ನ್ನು ಯಾವ ಕಾರಣಕ್ಕಾಗಿ ಮಾಡಲಾಗಿದೆ ಎಂದು ಗೊತ್ತಿಲ್ಲ ಎಂದರೆ ಸರಿ. ನಿಪಿ-5 ರ ಭಾವಚಿತ್ರವನ್ನು ಯಾವ ಕಾರಣಕ್ಕೆ ತೆಗೆಯಲಾಗಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನಿಪಿ-2 ಮತ್ತು 3 ರ ದಾಖಲೆಯನ್ನು ಪೊಲೀಸರು ಮೊದಲೇ ಬರೆದಿದ್ದರು ಅದಕ್ಕೆ ನಾನು ಸಹಿ ಮಾತ್ರ ಮಾಡಿರುತ್ತೇನೆ ಎಂದರೆ ಸರಿ.

**<u>ಮರು ವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**